**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**
**ಪೊನ್ನಂಪೇಟೆ.**

**ಸಿ.ಸಿ. ನಂ. 1478/2023** **ಫ್ರಾ.ಸಾ – 5**

**ಚಾ.ಸಾ – 11**

**ದಿನಾಂಕಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | Clement Saldhana |
| ತಂದೆಯ ಹೆಸರು | : | Lawrence Saldhana |
| ವಯಸ್ಸು | : | 54 ವರ್ಷ |
| ಉದ್ಯೋಗ | : | ASI |
| ವಾಸ ಸ್ಥಳ | : | ವಿರಾಜಪೇಟೆ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು 21.12.2020 ರಿಂದ 27.07.2025 ರ ತನಕ ಶ್ರೀಮಂಗಲ ಪೊ.ಠಾಣೆಯಲ್ಲಿ ASIಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಕಡತವನ್ನು ಚಾಸಾ 1 ರವರಿಂದ ಪಡೆದುಕೊಂಡು ದಿ. 18.09.2023 ರಂದು ಕೃತ್ಯ ನಡೆದ ಸ್ಥಳದ ಮಹಜರ್ ಮತ್ತು ಅಮಾನತು ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ಸಿಬ್ಬಂದಿರವರಿಂದ ಹಾಜರುಪಡಿಸಿದ್ದನ್ನು ಹೊಂದಿಕೊಂಡಿರುತ್ತೇನೆ. ನಂತರ ತನಿಖೆಯಿಂದಲೂ, ಪಂಚಾಯಿತಿದಾರರ ಹೇಳಿಕೆಯಿಂದಲೂ ಪಶುವೈದ್ಯಾದಿಕಾರಿಯವರ ದೃಡೀಕರಣ ಪತ್ರದಿಂದಲೂ ಆರೋಪಿಯ ಮೇಲೆ ಆರೋಪ ಸಾಬೀತಾದ್ದರಿಂದ ಅಂತಿಮ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು  ಕಲಂ 65 ಬಿ ಭಾ ಸಾ ಅಧಿನಿಯಮದಡಿಯಲ್ಲಿ ನೀಡಿದ ಪ್ರಮಾಣ ಪತ್ರ ಹಾಗೂ ಪಶುವೈದ್ಯಾದಿಕಾರಿಯವರು ನೀಡಿದ ವರದಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 7 ಮತ್ತು 8 ಎಂದು ಸಹಿಯನ್ನು ನಿ ಪಿ (7) ಎಂದು ಗುರುತಿಸಲಾಯಿತು. ಸಾಕ್ಷಿಯು FSL ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ ಪಿ ಜಿ ವಕೀಲರರಿಂದ ಃ –**

ಆರೋಪಿ ದನದ ಮಾಂಸವನ್ನು ಗ್ರಾಹಕರಿಗೆ ಮಾರಾಟ ಮಾಡಿದ ಬಗ್ಗೆ ಹಿಂದಿನ ತನಿಖಾಧಿಕಾರಿಯವರು ಉಲ್ಲೇಖಿಸಿದ್ದಾರೆ. ಮಾರಾಟ ಮಾಡುವಾಗ ತೂಕ ಮಾಡಲು ಯಾವುದೇ ಯಂತ್ರಗಳು ಇರಲಿಲ್ಲ. ಮಾರಾಟ ಮಾಡುವ ಉದ್ದೇಶ ಆರೋಪಿಗೆ ಇರಲಿಲ್ಲ ಮತ್ತು ಯಾವುದೇ ದನದ ಮಾಂಸವನ್ನು ಆರೋಪಿ ಹೊಂದಿರಲಿಲ್ಲ, ಆದ್ದರಿಂದ ಆರೋಪಿ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಆರೋಪಿಸಿದಂತೆ ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ